


ಸ್ವಲ್ಪ ಹೊತ್ತು ಯೋಚಿಸಿ ‘ನೋಡಿ ಅವು ಅಸಾಧ್ಯ ಶಕ್ತಿ ಉಳ್ಳವುಗಳು ನಮಗೆ ಅದನ್ನು ಬಗ್ಗು ಬಡಿಯುವ ಶಕ್ತಿ ಇಲ್ಲದಿದ್ದರೂ ಯುಕ್ತಿ ಅಂತೂ ಇದೆ. ಅದನ್ನು ಪ್ರಯೋಗಿಸಿದಲ್ಲಿ ಪುನಃ ಅವು ಇತ್ತ ಬಾರದಂತೆ ಮಾಡಬಹುದು’ ಎಂದಾಗ ಉಳಿದ ರೈತರು ‘ಅದೇನು ಯುಕ್ತಿ ಹೇಳಿ ನಾವೆಲ್ಲ ಒಟ್ಟಾಗಿ ಸೇರಿ ಅದನ್ನು ಮಾಡುತ್ತೇವೆ’ ಎಂದು ಒಕ್ಕೊರಲಿನಿಂದ ಹೇಳುತ್ತಾರೆ. ತನ್ನ ಮಾತು ಮುಂದುವರಿಸಿದ ಗುಂಪಿನ ನಾಯಕ ‘ಏನಿಲ್ಲ, ನೀವು ಜಮೀನಿನ ಮೂರು ಭಾಗದಲ್ಲಿ ಅದಕ್ಕೆ ಹೊಂದಿಕೊಂಡ ಜಾಗದಿಂದ ಒಂದಡಿ ಅಂತರ ಬಿಟ್ಟು ಹತ್ತಡಿ ಆಳ ಹಾಗೂ ಆರು ಅಡಿ ಅಗಲದ ಗುಂಡಿ ತೋಡಿ, ಇನ್ನೊಂದು ಭಾಗದಲ್ಲಿ ಅದೇ ತರಹ ಗುಂಡಿ ತೋಡಿ. ಆನಂತರ ಎಲ್ಲ ಗುಂಡಿಗಳಲ್ಲೂ ಕಾಲು ಭಾಗ ನೀರು ಹಾಕಿ ಅದಾದ ನಂತರ ನಾನು ಒಂದು ಬಗೆಯ ಮರದ ದ್ರಾವಣ ಕೊಡುವೆ ಅದನ್ನು ಆ ನೀರಿನಲ್ಲಿ ಚೆನ್ನಾಗಿ ಮಿಶ್ರಣ ಮಾಡಿ, ಕೊನೆಯಲ್ಲಿ ಗುಂಡಿಗೆ ಸೇರಿದಂತೆ ಮುಂದೆ ಅವುಗಳಿಗೆ ಕಾಣುವಂತೆ ಒಂದಿಷ್ಟು ಕಬ್ಬಿನ ರಾಶಿ ಮತ್ತು ಹತ್ತಿಪ್ಪತ್ತು ಬಾಳೆಹಣ್ಣಿನ ಗೊನೆ ಇಡಿ.

ಹಾಂ... ನೀವು ಆ ಗುಂಡಿಗೆ ನೀರು ಹಾಕುವ ಮುನ್ನ ಅದರ ಮೇಲ್ಭಾಗದಲ್ಲಿ ತೆಳುವಾದ ಎರಡು ಮೂರು ಬಿದಿರು ಅದರ ಮೇಲೆ ತೆಂಗಿನ ಗರಿ ಇಟ್ಟು, ನಂತರ ದೂರದಿಂದ ನೆಲದಂತೆ ಕಾಣುವ ಹಾಗೆ ಒಂದಿಷ್ಟು ಹುಲ್ಲು ಹಾಕಿ... ಬಾಳೆಹಣ್ಣು ಮತ್ತು ಕಬ್ಬಿನ ಆಸೆಗೆ ಬಂದ ಆನೆ ಆ ಟೊಳ್ಳು ಗುಂಡಿ ಮೇಲೆ ಕಾಲಿಟ್ಟೊಡನೆ ಗುಂಡಿಯ ಒಳಗೆ ಬಿದ್ದು ಬಿಡುತ್ತದೆ. ಆಗ ಅಲ್ಲಿ ನಾನು ಕೊಟ್ಟ ದ್ರಾವಣ ಅದರ ಚರ್ಮ ತಗುಲಿದರೆ ಅದಕ್ಕೆ ಮೈ ಎಲ್ಲ ವಿಪರೀತ ಕೆರೆತ ಶುರುವಾಗುತ್ತದೆ. ಕೊನೆಗೆ ಯಾಕಾದರೂ ಇಲ್ಲಿಗೆ ಬಂದೆನೋ ಎಂದು ಎದ್ದು ಓಡಿ ಹೋಗುತ್ತದೆ. ಮತ್ತೆಂದೂ ನಿಮ್ಮ ಜಮೀನಿನತ್ತ ತಲೆ ಹಾಕಲ್ಲ’ ಎಂದು ವಿವರಿಸಿ ಹೇಳುತ್ತಾನೆ. ಅಷ್ಟಕ್ಕೇ ಅವರು ಸಂತೋಷಪಟ್ಟು ಆತ ಹೇಳಿದ ಪ್ರಕಾರ ಚಾಚೂ ತಪ್ಪದೇ ಮಾಡುತ್ತಾರೆ. ಮುಂದೆ ಎರಡು ಮೂರು ದಿನಗಳಲ್ಲಿ ಆ ಆನೆ ದೂರದಿಂದ ಇವರು ಇಟ್ಟಿದ್ದ ಕಬ್ಬು, ಬಾಳೆಹಣ್ಣು ಕಂಡು ಆಸೆಯಿಂದ ಅದನ್ನು ತಿನ್ನಲು ಬಂದಾಗ ಅವರು ತೋಡಿದ ಗುಂಡಿಯೊಳಕ್ಕೆ ಬೀಳುತ್ತವೆ. ಅಷ್ಟೇ ಅಲ್ಲ ವಿಪರೀತ ಕೆರೆತ ಶುರು ಆದಾಗ, ರಾತ್ರಿ ಇಡೀ ಕಷ್ಟಪಟ್ಟು ಹೇಗೋ ಎರಡೂ ಆನೆಗಳು ಗುಂಡಿಯಿಂದ ಆಚೆ ಬಂದು ಇನ್ನು ಖಂಡಿತ ಈ ಪ್ರದೇಶಕ್ಕೆ ಬರಲ್ಲ ಎಂದು ಶಪಥ ಮಾಡಿ ಮತ್ತೆ ಬೇರೆ ಕಾಡಿನ ದಾರಿ ಹಿಡಿದು ಹೋಗುತ್ತವೆ. ಈ ವಿಚಾರ ಬಡ ರೈತರಿಗೆ ತಿಳಿದಾಗ ಅವರು ತುಂಬಾ ಖುಷಿಪಟ್ಟು ತಮ್ಮ ನಾಯಕನಿಗೆ ಧನ್ಯವಾದಗಳನ್ನು ಹೇಳುತ್ತಾರೆ.

# ಚಂಡಮಾರುತ...

ಡಾ. ಕರವೀರಪ್ರಭು ಕ್ಯಾಲಕೊಂಡ

ಕಲೆ: ಸಂತೋಷ್ ಸಸಿಹಿತ್ಲು



ಬಿಸಿಲು ಬಿದ್ದು ಕಡಲ ಒಡಲ
ತಾಪ ಹೆಚ್ಚಿತು
ಹವೆಯು ಕಾಯ್ದು ಹಗುರವಾಗಿ
ಮೇಲೆ ಹೋಯಿತು

ಬೀಸಿ ಬಂದ ತಂಪು ಗಾಳಿ
ಸುತ್ತಿ ಸುಳಿಯಿತು
ವೇಗದಿಂದ ನುಗ್ಗಿ ಬಂದು
ಬೆಳೆಯ ಕೆಡವಿತು

ದೊಡ್ಡ ದೊಡ್ಡ ತೆರೆಗಳಿಂದ
ದಡವು ಕುಸಿಯಿತು
ಕುಂಭದ್ರೋಣ ಮಳೆಯು ಬಿಡದೆ
ಧರೆಗೆ ಸುರಿಯಿತು

ಮಹಾಪೂರದಿಂದ ಜನತೆ
ಗೋಳು ಇಟ್ಟಿತು
ಆಸ್ತಿ ಪಾಸ್ತಿ ಕಳೆದುಕೊಂಡು
ಬಿಕ್ಕಿ ಅತ್ತಿತು

ದೈತ್ಯ ಶಕ್ತಿ ದೂತ ಯಾರು
ಗೊತ್ತು ಆಯಿತೆ?
ಸಾವಿನೊಡನೆ ಸಾಗಿಬರುವ
ಚಂಡಮಾರುತ

## ಕುಂಚ ಪ್ರಪಂಚ



**ಬಿಮನ್ ಪಟೇಲ್**
6ನೇ ತರಗತಿ,
ಶ್ರೀ ಜ್ಞಾನಾಕ್ಷಿ
ವಿದ್ಯಾನಿಕೇತನ
ಬೆಂಗಳೂರು



ಎಳೆಯರು ಬಿಡಿಸಿದ ವರ್ಣಚಿತ್ರ, ರೇಖಾಚಿತ್ರಗಳನ್ನು ಅವರ ತರಗತಿ, ಶಾಲೆಯ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ ‘ಕುಂಚ ಪ್ರಪಂಚ’ ವಿಭಾಗಕ್ಕೆ ಕಳಿಸಿಕೊಡಿ.
**ವಿಳಾಸ:** editorsu@sudha.co.in